# ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ

(ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಸಾಮಾಜಿಕ ಸಂಘಟನೆ)

## 5ನೇ ವಾರ್ಷಿಕೋತ್ಸವ ಹಾಗೂ ಹಿರಿಯ ಮಹಿಳಾ ಕಾರ್ಮಿಕರಿಗೆ ಅಭಿನಂದನಾ ಕಾರ್ಯಕ್ರಮ

**ದಿನಾಂಕ: 15.11.2009, ಭಾನುವಾರ ಸಮಯ: ಬೆಳಿಗ್ಗೆ 10.30**

*ಸ್ಥಳ:*

**ನಾಯಂಡ ಹಳ್ಳಿ ರೈಲ್ವೆ ಗೇಟ್ ಪಕ್ಕ, ಮದ್ದೂರಮ್ಮ ದೇವಸ್ಥಾನದ ಹತ್ತಿರ, ನಾಯಂಡಹಳ್ಳಿ ಮುಖ್ಯರಸ್ತೆ, ಮೈಸೂರು ರಸ್ತೆ, – 560 039**

ಆತ್ಮೀಯ ಸ್ನೇಹಿತರೇ,

**"ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ"**ಯು ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರ ಸಾಮಾಜಿಕ ಸಂಘಟನೆ. ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವ ಮಹಿಳೆಯರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುವ ಈ ಸಂಘಟನೆಯು, ಸಮಾಜದಲ್ಲಿ ಕಾರ್ಮಿಕ ಮಹಿಳೆಯರ ಸ್ಥಾನಮಾನ ಹೆಚ್ಚಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ.

2004 ರ ನವೆಂಬರ್ 1 ರಂದು ಅಧಿಕೃತವಾಗಿ ಪ್ರಾರಂಭವಾದ ಈ ಸಂಘಟನೆಗೆ ಈಗ 5 ವರ್ಷ ಪೂರೈಸುತ್ತಿರುವ ಸಂಭ್ರಮದ ಜೊತೆಗೆ ಮಹಿಳಾ ಕಾರ್ಮಿಕರ ಸ್ಥಿತಿಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಹೊಣೆಗಾರಿಕೆಯೂ ಹೆಚ್ಚಿದೆ. ಈ ಸಂಭ್ರಮದ ಆಚರಣೆಯ ಜೊತೆಗೇ ಕಾರ್ಮಿಕ ಮಹಿಳೆಯರ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಮುನ್ನಡೆಯ ಮುಂದಿರುವ ಸವಾಲುಗಳ ಬಗ್ಗೆ ಚರ್ಚೆ ನಡೆಸಬೇಕಾಗಿದೆ.

ಇಂದಿಗೂ ಗಾರ್ಮೆಂಟ್ಸ್ ಉದ್ಯಮದಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರುಗಳಿಗೆ ಜೀವನ ನಿರ್ವಹಣಾ ವೇತನ, ಕಿರುಕುಳ ಇಲ್ಲದ ಕೆಲಸದ ವಾತಾವರಣ, ಆರೋಗ್ಯ ಹಾಗೂ ರಕ್ಷಣೆ ಸರಿಯಾಗಿ ಸಿಗುತ್ತಿಲ್ಲ ಹಾಗೂ ತಾವು ಕೆಲಸಕ್ಕೆ ಹೋದಾಗ ತಮ್ಮ ಮಕ್ಕಳನ್ನು ನೋಡಿಕೊಳ್ಳಲು ಸರಿಯಾದ ವ್ಯವಸ್ಥೆ ಇಲ್ಲ. ಇವೆಲ್ಲ ಅಂಶಗಳು ಮಹಿಳಾ ಕಾರ್ಮಿಕರ ಮೇಲೆ ಅತೀವ ಒತ್ತಡವನ್ನುಂಟು ಮಾಡುತ್ತಿರುವುದಲ್ಲದೆ, ಸಮಾಜದಲ್ಲಿ ಗೌರವಯುತವಾಗಿ ಬದುಕಲು ಸಾಧ್ಯವಾಗುತ್ತಿಲ್ಲ.

ಗಾರ್ಮೆಂಟ್ಸ್ ಉದ್ಯಮದಲ್ಲಿ ಇಷ್ಟು ಒತ್ತಡಗಳನ್ನು ಅನುಭವಿಸಿಕೊಂಡು, 20 ವರ್ಷಕ್ಕೂ ಮೀರಿ ಇಂದಿಗೂ ಸೇವೆ ಸಲ್ಲಿಸುತ್ತಿರುವ ಮಹಿಳಾ ಕಾರ್ಮಿಕರಿಗೆ ಅಭಿನಂದನೆ ಸಲ್ಲಿಸುವುದು ಇಂದು ಅತ್ಯಂತ ಪ್ರಸ್ತುತವಾಗಿದೆ. ಸಾವಿರಾರು ಕಾರ್ಮಿಕರು ಇಂದಿಗೂ ಈ ಉದ್ಯೋಗದ ಮೇಲೆಯೇ ಆಧಾರ ಪಟ್ಟು ಜೀವನ ನಡೆಸುತ್ತಿದ್ದಾರೆ.

ಆದ್ದರಿಂದಲೇ ಈ ಎಲ್ಲಾ ಹಿರಿಯ ಮಹಿಳಾ ಕಾರ್ಮಿಕರನ್ನು ಅಭಿನಂದಿಸುವ ಉದ್ದೇಶದಿಂದ, ಮುನ್ನಡೆಯ 5ನೇ **ವಾರ್ಷಿಕೋತ್ಸವ**ದಂದು ಸಾಂಕೇತಿಕವಾಗಿ ಐದು ಮಂದಿ ಮಹಿಳಾ ಕಾರ್ಮಿಕರನ್ನು ಅಭಿನಂದಿಸಲಾಗುತ್ತಿದೆ.

ಕಾರ್ಯಕ್ರಮದ ಅತಿಥಿಗಳು

**ಡಾ. ವಿಜಯಾ** – ಮಹಿಳಾ ಚಿಂತಕರು, ಮುನ್ನಡೆ ಸಲಹಾ ಮಂಡಳಿಯ ಸದಸ್ಯರು

**ಹೇಮಲತಾ ಮಹಿಷಿ** – ವಕೀಲರು, ಮುನ್ನಡೆ ಸಲಹಾ ಮಂಡಳಿಯ ಸದಸ್ಯರು

ದಯವಿಟ್ಟು ಎಲ್ಲರೂ ಭಾಗವಹಿಸಿ. . . . . ನಮ್ಮ ಸಂಭ್ರಮದಲ್ಲಿ ಪಾಲ್ಗೊಳ್ಳಿ. . . . . . . .

| ಯಮುನಾ | ಸರೋಜಾ | ರತ್ನಮ್ಮ | ಲಲಿತಾ | ಶಿವಮ್ಮ |
|---|---|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ಪ್ರಧಾನ ಕಾರ್ಯದರ್ಶಿ | ಖಜಾಂಚಿ | ಸಂಘಟನಾ ಕಾರ್ಯದರ್ಶಿ |

**ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**

ನಂ 8/3, ಶ್ರೀಮಾತಾ ನಿಲಯ, ನ್ಯೂ ಟಿಂಬರ್ ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು – 560 026. ದೂರವಾಣಿ: 26751320

ನಂ. 35, ಮುತ್ತಯ್ಯ ಕಾಂಪೌಂಡ್, ನಾಯಂಡಹಳ್ಳಿ, ಮೈಸೂರು ರಸ್ತೆ, ಬೆಂಗಳೂರು – 560 039